Jun 26, 2019 Download the app Share on

paperboy Search Newspaper, Magazine

NEWSPAPERS MY SUBSCRIPTIONS VARAPRASADARAO VENKAT

MAGAZINES LOG OUT

HOME > NEWSPAPER > KANNADA > TUMKUR VARTHE > TUMKUR VARTHE TUMKUR EPAPER

# TUMKUR VARTHE TUMKUR EDITION

web:tumkurvarthe.epapertoday.com | email:tumkurvarthedaily@gmail.com

₹ 2/– 26 ಬುಧವಾರ 2019 ಜೂನ್ | ಸಂಪುಟ 37 | ಸಂಚಿಕೆ 329 | ಪುಟ 4

ESTD: 1982

ತುಮಕೂರು ವಾರ್ತೆ

ಸಂಪಾದಕ – ಪ್ರಕಾಶಕ: ಎಸ್.ಸುರೇಶ್‌ವತ್ಸ ವ್ಯವಸ್ಥಾಪಕ ಸಂಪಾದಕ: ಹೆಚ್.ಎ.ಭಾರತೀಶ್ ಉಪ ಸಂಪಾದಕ: ಜಿ.ಆರ್.ಸುಧೀಂದ್ರ

scps
ಶ್ರೀ ಚೌಡೇಶ್ವರಿ ಪೌಲ್ಟ್ರಿ ಸರ್ವೀಸ್
ಆರೋಗ್ಯವಂತ ಬಾಯ್ಲರ್ ಕೋಳಿ, ಫಾರಂ ಕೋಳಿಗಾಗಿ ಸಂಪರ್ಕಿಸಿ..
ಪ್ರೊ.: ಗೋವಿಂದರಾಜು
ಮೊ.: 9880767227

**ಮುಂಜಾನೆ ಮಾತು**

ಯಾರೂ ನಮ್ಮ ವಿಚಾರಗಳನ್ನು ಒಪ್ಪುವುದಿಲ್ಲವೆಂದರೆ ನಮ್ಮಲ್ಲೇ ಏನೋ ದೋಷವಿರಬಹುದು ಎಂದು ತಿಳಿದುಕೊಂಡು ತಿದ್ದಿಕೊಳ್ಳೋಣ..

## ಸ್ಮಾರ್ಟ್‌ಸಿಟಿ ಟೀಕಿಸುವವರಿಗೆ ವ್ಯವಸ್ಥಾಪಕ ನಿರ್ದೇಶಕರ ಟಾಂಗ್

# ನೋಡ್ತಿರೀ, ತುಮಕೂರು ಸ್ಮಾರ್ಟಾಗುತ್ತೆ!



ತುಮಕೂರು: ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಪೂರ್ಣಗೊಂಡ ಬಳಿಕ ಅವುಗಳ ಅಗತ್ಯ ಮತ್ತು ಪರಿಣಾಮಗಳು ...

70ರಷ್ಟನ್ನು ಪ್ರದೇಶಗಳ ಅಭಿವೃದ್ಧಿಗೆ ವಿನಿಯೋಗಿಸಲಾಗುತ್ತಿದೆ. ಶೇ 30ರಷ್ಟನ್ನು ಆಧುನಿಕ ತಾಂತ್ರಿಕ ವ್ಯವಸ್ಥೆಗಳನ್ನು ಅಳವಡಿಸಲು ವ್ಯಯಿಸಲಾಗುತ್ತಿದೆ. ಪ್ರದೇಶ ಅಭಿವೃದ್ಧಿಯಲ್ಲಿ ನಗರದ 4, 5, 14, 15, 16, 19 ಮತ್ತು ಭಾಗಶಃ 7ನೇ ವಾರ್ಡ್‌ಗಳನ್ನು ಆಯ್ಕೆ ಮಾಡಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಇಲಾಖೆಗಳಿಗೆ ಅನುಷ್ಠಾನದ ಹೊಣೆ: ಆರೋಗ್ಯ ಇಲಾಖೆ ಜಿಲ್ಲಾಸ್ಪತ್ರೆ ಆವರಣದಲ್ಲಿ ತುರ್ತು ಚಿಕಿತ್ಸೆಯ ಟ್ರಾಮಾ ಕೇಂದ್ರ ನಿರ್ಮಿಸಲು, ಕೆಎಸ್‌ಆರ್‌ಟಿಸಿ ನಗರ ಕೇಂದ್ರ ಬಸ್ ನಿಲ್ದಾಣ ಅಭಿವೃದ್ಧಿಪಡಿಸಲು, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಮಹಾತ್ಮಾ ಗಾಂಧಿ ಕ್ರೀಡಾಂಗಣ ಉನ್ನತೀಕರಿಸಲು ಹಾಗೂ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಅಮಾನಿಕೆರೆಗೆ ನೀರು ತುಂಬಿಸುವ ಯೋಜನೆಗಳಿಗೆ ಸ್ಮಾರ್ಟ್‌ಸಿಟಿಯಿಂದ ಅನುದಾನ ನೀಡಲಾಗುತ್ತಿದೆ

## ಪ್ರಗತಿಯಲ್ಲಿ 47 ಕಾಮಗಾರಿ

ಸ್ಮಾರ್ಟ್‌ಸಿಟಿಯಡಿ 22 ಸಣ್ಣ ಕಾಮಗಾರಿಗಳು ಮುಕ್ತಾಯಗೊಂಡಿವೆ. ₹ 515.43 ಕೋಟಿಗಳ 47 ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದೆ ಎಂದು ರಂಗಸ್ವಾಮಿ ಅವರು ಮಾಹಿತಿ ನೀಡಿದರು. ₹ 255.40 ಕೋಟಿಗಳ 17 ಯೋಜನೆಗಳು ಟೆಂಡರ್ ಪ್ರಕ್ರಿಯೆ ಹಂತದಲ್ಲಿವೆ. ₹ 135.75 ಕೋಟಿಗಳ ಯೋಜನೆಗಳು ವಿಸ್ತೃತ ಯೋಜನಾ ವರದಿ ತಯಾರಿಸಲಾಗುತ್ತಿದೆ ಎಂದರು.

ಸ್ಮಾರ್ಟ್‌ಸಿಟಿಯ ಎಲ್ಲ ಕಾಮಗಾರಿಗಳು ಪಾರದರ್ಶಕವಾಗಿ ನಡೆಯುತ್ತಿವೆ. ಇಲ್ಲಿ ಯಾರು, ಯಾರಿಗೂ ಕಮಿಷನ್ ಕೊಡುತ್ತಿಲ್ಲ, ತೆಗೆದುಕೊಳ್ಳುತ್ತಿಲ್ಲ.

ಬಿ.ಟಿ.ರಂಗಸ್ವಾಮಿ, ವ್ಯವಸ್ಥಾಪಕ ನಿರ್ದೇಶಕ,
ಸ್ಮಾರ್ಟ್‌ಸಿಟಿ ಲಿಮಿಟೆಡ್

## ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಯೋಜನೆಗಳು

## ದೊಡ್ಡಬಳ್ಳಾಪುರ: ಶಂಕಿತ ಉಗ್ರ ಸೆರೆ

ದೊಡ್ಡಬಳ್ಳಾಪುರ: ಪಶ್ಚಿಮ ಬಂಗಾಳದ ಬುರ್ದ್ವಾನ್‌ನ ಖಗ್ರಾಗಡದಲ್ಲಿ 2014 ರಲ್ಲಿ ಸಂಭವಿಸಿದ್ದ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿ ಹಬೀಬುಲ್ ರೆಹಮಾನ್ (30) ಎಂಬಾತನನ್ನು ದೊಡ್ಡಬಳ್ಳಾಪುರದಲ್ಲಿ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಮಂಗಳವಾರ ಬೆಳಿಗ್ಗೆ ಬಂಧಿಸಿದೆ.

ಬಂಧಿತ ಜಮಾತ್ ಉಲ್ ಮುಜಾಹಿದೀನ್, ಬಾಂಗ್ಲಾದೇಶ ಎಂಬ ಉಗ್ರ ಸಂಘಟನೆಯ ಸದಸ್ಯ ಎಂದು ಎನ್‌ಐಎ ತಿಳಿಸಿದೆ. 2014ರ ಅ. 2ರಂದು ಖಗ್ರಾಗಡದ ಹಸನ್ ಚೌಧರಿ ಎಂಬುವವರ ಮನೆಯಲ್ಲಿ ಕಚ್ಚಾ ಬಾಂಬ್ ತಯಾರಿಸುತ್ತಿದ್ದಾಗ ಸಂಭವಿಸಿದ ಸ್ಫೋಟದಲ್ಲಿ ಇಬ್ಬರು ಮೃತಪಟ್ಟು, ಒಬ್ಬರು ಗಾಯಗೊಂಡಿದ್ದರು. ಘಟನೆ ಬಗ್ಗೆ ಆರಂಭದಲ್ಲಿ ಬುರ್ದ್ವಾನ್ ಪೊಲೀಸರು ತನಿಖೆ ನಡೆಸಿದ್ದು, ನಂತರ ಪಶ್ಚಿಮ ಬಂಗಾಳದ ಸಿಐಡಿ ತನಿಖೆ ನಡೆಸಿತ್ತು. ಬಳಿಕ ಎನ್‌ಐಎಗೆ ವರ್ಗಾಯಿಸಲಾಗಿತ್ತು.

ದೊಡ್ಡಬಳ್ಳಾಪುರದ ಚಿಕ್ಕಪೇಟೆ ...

Regd. No. : MSCS/CR1130/2014
Tel : 0816-2260146
TMCC
ISO 9001-2008 Certified
ತುಮಕೂರು ಮರ್ಚೆಂಟ್ಸ್ ಕ್ರೆಡಿಟ್ ಕೋ-ಆಪರೇಟೀವ್
ಪ್ರಧಾನ ಕಛೇರಿ : ಜೆ.ಸಿ. ರಸ್ತೆ, ತುಮಕೂರು-572 101.
(MULTI STATE CO-OPERATIVE SOCIETY)
Festive Bonanza

9.50%* for New CAR LOANS
For More Details Contact Head Office or Nearest Branch
T.A. SRIKARA Vice-President
"Join & Grow with Us"
Dr. N.S.JAYAKUMAR President

ಕಚೇರಿ ವಿಳಾಸ ಬದಲಾಗಿದೆ

Jun 26, 2019 Download the app Share on

paperboy Search Newspaper, Magazine

NEWSPAPERS MY SUBSCRIPTIONS VARAPRASADARAO VENKAT

MAGAZINES LOG OUT

HOME > NEWSPAPER > KANNADA > TUMKUR VARTHE > TUMKUR VARTHE TUMKUR EPAPER

# TUMKUR VARTHE TUMKUR EDITION



ಕರಡಿಧಾಮಕ್ಕೆ ಬಿಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಗ್ರಾಮಸ್ಥರು ತಮ್ಮ ಹೊಲಗಳಲ್ಲಿ ಆಕಸ್ಮಿಕವಾಗಿ ಕರಡಿಗಳು ಪ್ರತ್ಯಕ್ಷವಾದರೆ ಅವುಗಳಿಗೆ ಯಾವುದೇ ರೀತಿ ಕಲ್ಲು ಹೊಡೆಯುವುದಾಗಲಿ ಅಥವಾ ಕೆಣಕಲು ಪ್ರಯತ್ನಪಡಬಾರದು. ಅದರ ಪಾಡಿಗೆ ಅವುಗಳನ್ನು ಬಿಟ್ಟುಬಿಟ್ಟರೆ ಅವು ಯಾರಿಗೂ ತೊಂದರೆ ಕೊಡುವುದಿಲ್ಲ.

–ಚಿನ್ನಪ್ಪ, ವಲಯ ಅರಣ್ಯಾಧಿಕಾರಿ

ಮಧುಗಿರಿ: ತಾಲೂಕಿನ ಚಿನ್ನೇನಹಳ್ಳಿಯ ಸಮೀಪದ ವೀರಣ್ಣನ ಬೆಟ್ಟ ಕರಡಿಗಳು ವಾಸದ ತಾಣವಾಗಿ ಮಾರ್ಪಟ್ಟಿದೆ. ರಾತ್ರಿ ಹಾಗೂ ಬೆಳಗಿನ ಜಾವ ಆಹಾರ ಅರಸಿ ಸುತ್ತಮುತ್ತಲಿನ ಗ್ರಾಮಗಳಿಗೆ ಹಿಂಡು ಹಿಂಡಾಗಿ ಲಗ್ಗೆ ಇಡುತ್ತಿದ್ದು, ರಸ್ತೆ, ಹೊಲ, ಕೆರೆ, ಗಿಡಗಳ ಪೊದೆ ಸೇರಿದಂತೆ ಎಲ್ಲೆಂದರಲ್ಲಿ ಕರಡಿಗಳು ಪ್ರತ್ಯಕ್ಷವಾಗುತ್ತಿವೆ. ಇದರಿಂದ ಗ್ರಾಮಸ್ಥರು ಆತಂಕದಲ್ಲಿ ಮನೆಯಿಂದ ಆಚೆಗೆ ಬರಲು ಸಹ ಎದರುವ ಪರಿಸ್ಥಿತಿ ಉಂಟಾಗಿದ್ದು, ಬೇರೆ ಕಡೆ ಹಿಡಿದ ಕರಡಿಗಳನ್ನು ಇಲ್ಲಿ ತಂದು ಬಿಟ್ಟು ಹೋಗುತ್ತಿದ್ದಾರೆಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಈ ಹಿಂದೆ ಇದೇ ವ್ಯಾಪ್ತಿಯ ಪ್ರದೇಶದಲ್ಲಿ ಮನುಷ್ಯನನ್ನ ಕಚ್ಚಿ ಸಾಯಿಸಿದ್ದ ವಿಷಯ ಇಡೀ ರಾಜ್ಯದಲ್ಲೆಡೆ ಸುದ್ದಿಯಾಗಿತ್ತು, ಈ ಘಟನೆ ಮಾಸುವ ಮುನ್ನವೇ ಈ ಭಾಗದಲ್ಲಿ ಮತ್ತೆ ಕರಡಿಗಳು ಪ್ರತ್ಯಕ್ಷವಾಗುತ್ತಿರುವುದನ್ನು ಕಂಡ ಜನತೆ ಭಯಬೀತರಾಗಿದ್ದು, ಆರಣ್ಯ ಇಲಾಖೆಯವರು ಕರಡಿಗಳನ್ನು ಹಿಡಿಯಲು ಬೋನ್ ಹಿಡದೆ ನಿರ್ಲಕ್ಷ್ಯ ತೋರುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇನ್ನೂ ಉದ್ಯೋಗಸ್ಥರು ರಾತ್ರಿ ಸಮಯ ಊರಿಗೆ ತೆರಳಲು ಹೆದರುತ್ತಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಇತ್ತ ಗಮನಹರಿಸಿ ಸಮಸ್ಯೆಯನ್ನು ಶೀಘ್ರ ಬಗೆಹರಿಸಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.



**ನಿಟ್ಟೂರು: ನನಗೆ ಅನ್ಯಾಯವಾಗಿದ್ದು ನನಗೆ ನ್ಯಾಯ ಕೊಡಿಸಿ ಎಂದು ಕಡಬ ನಾಡ ಕಚೇರಿಯಲ್ಲಿ ಕೆಲಸ ಮಾಡುವ ಕಂಪ್ಯೂಟರ್ ಆಪರೇಟರ್ ಚೇತನ್ ಕುಮಾರ್ ತಹಶೀಲ್ದಾರ್ ವಿರುದ್ಧ ಪ್ರತಿಭಟನೆ ಮಾಡಿದ ಘಟನೆ ಮಂಗಳವಾರ ನಡೆಯಿತು.**

ಗುಬ್ಬಿ ತಾಲೂಕಿನ ಕಡಬ ನಾಡಕಚೇರಿಯಲ್ಲಿ ಕೆಲಸ ಮಾಡುತ್ತಿರುವ ಚೇತನ್ 05 ವರ್ಷದ ಅವಧಿಗೆ ಕಂಪ್ಯೂಟರ್ ಆಗಿ ಕೆಲಸ ನಿರ್ವಹಣೆ ಮಾಡಲು ಸೇರ್ಪಡೆಯಾಗಿದ್ದು ತಹಶೀಲ್ದಾರ್ ಮಮತಾ ಅವರು ಏಕಾಏಕಿ ನನ್ನನ್ನ ಆಧಾರ್ ಕಾರ್ಡ್ ತೆಗೆಯಲು ಗುಬ್ಬಿಗೆ ವರ್ಗವಣೆ ಮಾಡಿದ್ದಾರೆ, ಇದು ಸರಿಯಲ್ಲ ಹಾಗೂ ನನಗೆ ಮುಖ್ಯ ಕಂಪ್ಯೂಟರ್ ಕೆಲಸಗಾರನಾಗಿ ಸೇರ್ಪಡೆಯಾಗಿದ್ದೆ, ಆದರೆ ಈಗ ಆಧಾರ್ ಕಾರ್ಡ್ ತೆಗೆಯಲು ಹಾಕಿ ಡಿ ಗ್ರೇಡ್ ಮಾಡಿದ್ದಾರೆ, ತಾಲೂಕಿನಲ್ಲಿ ಮೂರು ಜನರನ್ನು ಮಾತ್ರ ಬದಲಾವಣೆ ಮಾಡಿದ್ದಾರೆ, ಇದು ಸರಿಯಾದ ಮಾರ್ಗವಲ್ಲ, ನನಗೆ ನ್ಯಾಯ ಕೊಡಿ, ನನಗೆ ಸರಿ ಸಮಾನವಾದ ಹುದ್ದೆ ನೀಡಬೇಕು, ಆಗ ನಾನು ಕೆಲಸ ಮಾಡಲು ಸಿದ್ಧವೆಂದು ಎಂದು ಆಗ್ರಹಿಸಿದರು.

ಪಾಸ್‌ವರ್ಡ್ ನೀಡಲು ನೀರಾಕರಿಸಿದ್ದ ಚೇತನ್ ಕುಮಾರ್ ನಂತರ ಸ್ಥಳಕ್ಕೆ ಆಗಮಿಸಿದ್ದ ಕಂದಾಯ ಇಲಾಖೆ ಅಧಿಕಾರಿ ನಾಗಭೂಷಣ್, ಡಿ.ಟಿ.ಪ್ರಕಾಶ್ ಹಾಗೂ ಪಿಎಸ್‌ಐ ಹರೀಶ್ ಕುಮಾರ್ ಚರ್ಚೆ ಮಾಡಿ ಪಾಸ್‌ವರ್ಡ್‌ನ್ನು ಇನ್ನೊಬ್ಬ ಕೆಲಸಗಾರನಿಗೆ ನೀಡುವ ಮೂಲಕ ಕೆಲಸ ಕಾರ್ಯ ಆರಂಭವಾದವು.

ಇದೇ ಸಂದರ್ಭದಲ್ಲಿ ರೈತ ಸಂಘದ ಮುಖಂಡ ಚನ್ನಬಸವಯ್ಯ ಮಾತನಾಡಿ ಉತ್ತಮವಾಗಿ ಕೆಲಸ ನಿರ್ವಹಣೆ ಮಾಡುತ್ತಿದ್ದ ಚೇತನ್ ಅವರನ್ನು ಏಕಾಏಕಿ ಬದಲಾವಣೆ ಮಾಡಿರುವುದು ಸರಿಯಲ್ಲ, ರೈತರೊಟ್ಟಿಗೆ ಉತ್ತಮವಾಗಿ ಕೆಲಸ ಮಾಡಿತ್ತಿದ್ದರು, ಮತ್ತೆ ಅವರನ್ನು ಇಲ್ಲಿಯೇ ನೇಮಿಸಬೇಕು ಎಂದು ಆಗ್ರಹಿಸಿದರು.

ಇದೇ ಸಂದರ್ಭದಲ್ಲಿ ಹಲವು ದಲಿತ ಮುಖಂಡರು ಹಾಗೂ ರೈತ ಸಂಘದ ಮುಖಂಡರು ಹಾಜರಿದ್ದರು.

ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಸಂಜೆ ಮನೆಯವರು ಬಂದು ನೋಡಿದಾಗ ಸಾವನ್ನಪ್ಪಿರುವುದು ಗಮನಕ್ಕೆ ಬಂದಿದೆ. ಈ ಸಂಬಂಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಶಿಕ್ಷಕ ಆತ್ಮಹತ್ಯೆ

**ಶಿರಾ:** ಶಿಕ್ಷಕ ಕೃಷ್ಣ(25) ಸೋಮವಾರ ರಾತ್ರಿ ಮನೆಯಲ್ಲಿ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಾಲ್ಲೂಕಿನ ಅಮಲಗೊಂದಿ ಗ್ರಾಮದ ಕೃಷ್ಣ ಅವರು ಪಟ್ಟನಾಯಕನಹಳ್ಳಿ ಹೊಸ ಬಡಾವಣೆ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ವರ್ಷದಿಂದ ಸೇವೆ ಸಲ್ಲಿಸುತ್ತಿದ್ದರು.ಆತ್ಮಹತ್ಯೆಗೆ ನಿರ್ದಿಷ್ಟ ಕಾರಣ ತಿಳಿದು ಬಂದಿಲ್ಲ. ಕಳ್ಳಂಬೆಳ್ಳ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಕಾಂಗ್ರೆಸ್

## ಗ್ರಂಥಾಲಯ ಮೇಲ್ವಿಚಾರಕರ ನೆರವಿಗೆ ಸರ್ಕಾರ ಧಾವಿಸಲಿ

**ತುರುವೇಕೆರೆ: ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕರ ಸಮಸ್ಯೆಗಳಿಗೆ ಸರ್ಕಾರ ಆಲಿಸುವ ಮೂಲಕ ನ್ಯಾಯ ಒದಗಿಸಿಕೊಡಬೇಕೆಂದು ತಾಲ್ಲೂಕು ಗ್ರಂಥಾಲಯ ಮೇಲ್ವಿಚಾರಕರ ಸಂಘದ ಅಧ್ಯಕ್ಷ ಬಿ.ಕೆ.ಪ್ರೇಮಕುಮಾರ್ ಆಗ್ರಹಿಸಿದ್ದಾರೆ.**

ಈ ಕುರಿತು ಮಾತನಾಡಿದ ಅವರು ದಿನದಿಂದ ಬದಲಾದ ಸರ್ಕಾರದ ನೀತಿಯ ಹೊಡೆತಕ್ಕೆ ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕರು ನಲುಗುವಂತಾಗಿದೆ. 1987 ರಿಂದಲೂ ಕೇವಲ 300 ರೂ ನಿಂದ ಕೆಲಸ ಆರಂಭಿಸಿರುವ ಗ್ರಂಥಾಲಯ ಮೇಲ್ವಿಚಾರಕರುಗಳು ಕೆಲಸ ನಿರ್ವಹಿಸಿದ್ದಾರೆ. ಕಳೆದ ವರ್ಷದಿಂದ 7 ಸಾವಿರ ಗೌರವಧನ ನೀಡಲಾಗುತ್ತಿದೆ. ಗ್ರಂಥಾಲಯ ಮೇಲ್ವಿಚಾರಕರನ್ನು ಸರ್ಕಾರ ಖಾಯಂಗೊಳಿಸದೇ ಮೀನಾಮೇಷ ಎಣಿಸುತ್ತಿದೆ. ಈ ಹಿನ್ನಲೆಯಲ್ಲಿ ಮನನೊಂದ ಚಿಕ್ಕಬಳಾಪುರದ ಹಾನೂರು ಗ್ರಾಮದ ಗ್ರಂಥಾಲಯ ಮೇಲ್ವಿಚಾರಕ ರೇವಣ್ಣಕುಮಾರ್ ಅತ್ಮಹತ್ಯೆಗೆ ಪ್ರಯತ್ನಿಸಿದ್ದಾನೆ. ಇದು ಗ್ರಂಥಾಲಯ ಮೇಲ್ವಿಚಾರಕರ ಅಸಹನೀಯ ಬದುಕಿಗೆ ಸಾಕ್ಷಿಯಾಗಿದ್ದು. ಸರ್ಕಾರ ಈ ಕೂಡಲೆ ಮೇಲ್ವಿಚಾರಕರ ನೆರವಿಗೆ ಧಾವಿಸುವಂತೆ ಮನವಿ ಮಾಡಿದ್ದಾರೆ. ಈ ವೇಳೆ ಕಾರ್ಯದರ್ಶಿ ದಯಾನಂದ್,

### ಹೊಸ ನೀರಾವರಿ ಯೋಜನೆಯ ಪ್ರಸ್ತಾಪಿಸಿದ ಮಾಜಿ ಸಚಿವ ಟಿ.ಬಿ.ಜಯಚಂದ್ರ

# ಅಘನಾಶಿನಿ ಯೋಜನೆಗೆ ಮಾಸ್ಟರ್‌ಪ್ಲಾನ್!

**ತುಮಕೂರು: ಪಶ್ಚಿಮ ಘಟ್ಟದಲ್ಲಿನ ಅಘನಾಶಿನಿ ನದಿಯಲ್ಲಿನ ಅಂದಾಜು 120 ಟಿಎಂಸಿ ಅಡಿ ನೀರು ಪ್ರತಿವರ್ಷ ಸಮುದ್ರಕ್ಕೆ ಹರಿದು ವ್ಯರ್ಥವಾಗುತ್ತಿದೆ. ಅದರಲ್ಲಿ ಕನಿಷ್ಠ 50 ಟಿಎಂಸಿ ಅಡಿ ನೀರನ್ನು ಬೆಂಗಳೂರಿಗೆ ಹರಿಸುವ ಯೋಜನೆಯನ್ನು ರಾಜ್ಯ ಸರ್ಕಾರ ಕೈಗೆತ್ತಿಕೊಳ್ಳಬೇಕು ಎಂದು ಕಾಂಗ್ರೆಸ್ ಮುಖಂಡ ಟಿ.ಬಿ.ಜಯಚಂದ್ರ ಸಲಹೆ ಮಾಡಿದರು.**

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಶ್ಚಿಮ ಘಟ್ಟದಲ್ಲಿನ ಎಲ್ಲ ನದಿಗಳಿಂದ 2,000 ಟಿಎಂಸಿ ಅಡಿ ನೀರನ್ನು ಬಳಸಿಕೊಳ್ಳಲು ಅವಕಾಶವಿದೆ. ಈ



ಬೆಳ್ಳಾವಿ, ಕೋರಾ, ಕ್ಯಾತ್ಸಂದ್ರ, ದಾಬಸ್‌ಪೇಟೆ ಮೂಲಕ ಅರ್ಕಾವತಿ ನದಿಯ ಹೆಸರಘಟ್ಟ ಮತ್ತು ತಿಪ್ಪಗೊಂಡನಹಳ್ಳಿ ಜಲಾಶಯಗಳನ್ನು ತುಂಬಿಸಬಹುದಾಗಿದೆ. ಈ ನೀರು ಸಾಗಿಸುವ ಹಾದಿಯಲ್ಲಿ ಅಂದಾಜು 450 ಮೀಟರ್‌ನಷ್ಟು ಎತ್ತರದ ವರೆಗೆ ನೀರನ್ನು ಲಿಫ್ಟ್ ಮಾಡಬೇಕಾಗುತ್ತದೆ ಎಂದು ವಿವರ ನೀಡಿದರು.

ಈ ನೀರಾವರಿ ಯೋಜನೆಯಿಂದ ಮಾರ್ಗದಲ್ಲಿ ಬರುವ ಜಲಾಶಯಗಳು ತುಂಬುತ್ತವೆ. ಸುತ್ತಲಿನ ಪ್ರದೇಶಗಳಲ್ಲಿನ ಅಂತರ್ಜಲ ಹೆಚ್ಚಾಗುತ್ತದೆ. ಚಿತ್ರದುರ್ಗ, ತುಮಕೂರು ಮತ್ತು ಬೆಂಗಳೂರಿನಲ್ಲಿನ ನೀರಿನ ಕೊರತೆಯ ಸಮಸ್ಯೆಗೆ ಬೆಂಗಳೂರು ನಗರ ತುಮಕೂರಿನವರೆಗೂ ವಿಸ್ತರಿಸಬಹುದು. ಇಂತಹ ದೂರಗಾಮಿ ಯೋಜನೆಗಳಿಗೆ ₹ 12,000 ಕೋಟಿ ವ್ಯಯಿಸಿದರೆ, ಮುಂದಿನ ಪೀಳಿಗೆಗೆ ಬಹಳ ಅನುಕೂಲ ಆಗುತ್ತದೆ. ಈ ಕುರಿತು ಮುಖ್ಯಮಂತ್ರಿ, ಸಚಿವರು ಮತ್ತು ಶಾಸಕರ ಗಮನ ಸೆಳೆಯುತ್ತೇನೆ ಎಂದು ಅವರು ಹೇಳಿದರು.

ಸಾಮಾಜಿಕ ಕಾರ್ಯಕರ್ತ ಡಿ.ಆರ್.ರಾಘವೇಂದ್ರ ಗುಪ್ತಾ, ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಈಶ್ವರಯ್ಯ, ವಕೀಲ ಶಿವರಾಮ್ ಹಾಲೇನಹಳ್ಳಿ ಇದ್ದರು.

ಈ ಯೋಜನೆಗೆ ಕೇಂದ್ರದಿಂದ ಅನುಮತಿ ಪಡೆಯಲು ನೀವು ಪ್ರಯತ್ನಿಸುತ್ತೀರಾ ಎಂಬ ಪ್ರಶ್ನೆಗೆ, ಅಘನಾಶಿನಿ ನಮ್ಮ

Jun 26, 2019 Download the app Share on


paperboy Search Newspaper, Magazine

NEWSPAPERS MY SUBSCRIPTIONS VARAPRASADARAO VENKAT

MAGAZINES LOG OUT

HOME > NEWSPAPER > KANNADA > TUMKUR VARTHE > TUMKUR VARTHE TUMKUR EPAPER

# TUMKUR VARTHE TUMKUR EDITION



Jun 26, 2019 Download the app Share on

paperboy Search Newspaper, Magazine

NEWSPAPERS MY SUBSCRIPTIONS VARAPRASADARAO VENKAT

MAGAZINES LOG OUT



# TUMKUR VARTHE TUMKUR EDITION





ಹುಳಿಯಾರು ಹೋಬಳಿಯ ಭಟ್ಟರಹಳ್ಳಿ, ಎಂ.ವಿ.ಹಟ್ಟಿ, ಮೋಟಿಹಳ್ಳಿ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಅವಿರತ ಸಂಸ್ಥೆ ವತಿಯಿಂದ ಪ್ರತೀ ವರ್ಷದಂತೆ ಈ ವರ್ಷವೂ ಉಚಿತವಾಗಿ ನೋಟ್ ಬುಕ್‌ಗಳನ್ನು ವಿತರಿಸಲಾಯಿತು.

## ಶಾರದಾ ಸ್ಕೂಲ್ ಶಿಕ್ಷಕಿಯರಿಂದ ಯೋಗ ಪಾಠ

ಹುಳಿಯಾರು: ಹುಳಿಯಾರಿನ ಶಾರದಾ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಯೋಗ ದಿನಾಚರಣೆ ಆಚರಿಸಲಾಯಿತು. ಶಾಲೆಯ ಶಿಕ್ಷಕಿಯರೆಲ್ಲರೂ ಒಟ್ಟಿಗೆ ಸೇರಿ ವಿದ್ಯಾರ್ಥಿಗಳಿಗೆ ಯೋಗ ಪಾಠ ಮಾಡುವ ಮೂಲಕ ಗಮನ ಸೆಳೆದರು.

ಏಕಾಗ್ರತೆಗೆ ಪೂರಕವಾದ ವೃಕ್ಷಾಸನ, ಇಂದ್ರಿಯಗಳ ನಿಗ್ರಹಕ್ಕೆ ಪೂರಕವಾರ ಕೂರ್ಮಾಸನ, ಬೆನ್ನು ನೋವು ನಿವಾರಣೆಗೆ ಪೂರಕವಾದ ಅರ್ಧಚಕ್ರಾಸನ, ಗ್ಯಾಸ್ಟ್ರಿಕ್ ನಿವಾರಣೆಗೆ ಪೂರಕವಾದ ಉತ್ತನಾಸನ, ಸೊಂಟನೋವು ನಿವಾರಣೆಗೆ ಮರ್ಕಟಾಸನ ಹಾಗೂ ಅನೇಕ ಕಾಯಿಲೆಗಳ ನಿವಾರಣೆಗೆ ಪೂರಕವಾದ ಸೂರ್ಯನಮಸ್ಕಾರಗಳನ್ನು ವಿದ್ಯಾರ್ಥಿಗಳಿಗೆ ಶಿಕ್ಷಕಿಯರು ಹೇಳಿಕೊಟ್ಟರು.

ಶಾಲೆಯ ಮುಖ್ಯಶಿಕ್ಷಕಿ ಗೌರಮ್ಮ ಅವರು ಈ ಸಂದರ್ಭದಲ್ಲಿ ಮಾತನಾಡಿ ಶರೀರದ ದೈಹಿಕ ಮತ್ತು ಮಾನಸಿಕ ಕ್ರಿಯಾಶೀಲತೆ, ಕೆಲಸದಲ್ಲಿ ಏಕಾಗ್ರತೆ ಹಾಗೂ ಆರೋಗ್ಯಕ್ಕಾಗಿ ಯೋಗಾಭ್ಯಾಸ ಪ್ರತಿಯೊಬ್ಬರ ದಿನಚರಿಯಾಗಬೇಕು. ಮಕ್ಕಳಿಂದ ಹಿರಿಯರವರೆಗೂ



ವಯಸ್ಸಿಗೆ ತಕ್ಕಂತೆ ಯೋಗವನ್ನು ಮಾಡಬಹುದಾಗಿದೆ.

ಆಧುನಿಕ ಯುಗದಲ್ಲಿ ಆರೋಗ್ಯಕ್ಕಾಗಿ ಜನರು ಹೆಚ್ಚು ಖರ್ಚು ಮಾಡುತ್ತಿದ್ದು ಯೋಗದಿಂದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದರು.

ಶಿಕ್ಷಕಿಯರಾದ ರೇಖಾ, ಶಿಲ್ಪಾ, ಮಂಜುಳಾ, ಗೀತಾ, ಮಾಲಾ, ಲಕ್ಷ್ಮೀ, ಆಯಿಷಾ, ಮಮತಾ, ಶಿವಮ್ಮ, ಮತ್ತಿತರರು ಇದ್ದರು. 4 ನೇ ತರಗತಿ ವಿದ್ಯಾರ್ಥಿ ಮನೋಜ್ ಅವರು ಈ ಸಂದರ್ಭದಲ್ಲಿ ವಿವಿಧ ಆಸನಗಳನ್ನು ಪ್ರದರ್ಶಿಸಿ ಅಚ್ಚರಿ ಮಾಡಿಸಿದನು.

**ಸುದ್ದಿ ಸಮಾಚಾರ**

## ಕೃತಿಗಳ ಆಹ್ವಾನ

**ತುಮಕೂರು:** ಕರ್ನಾಟಕ ಸಾಹಿತ್ಯ ಅಕಾಡೆಮಿಯು 2018ನೇ ವರ್ಷದಲ್ಲಿ ಪುಸ್ತಕ ಬಹುಮಾನ ನೀಡಲು ಕಾವ್ಯ (ವಚನಗಳು ಮತ್ತು ಹನಿಗವನಗಳು ಸೇರಿ), ನವಕವಿಗಳ ಪ್ರಥಮ ಸಂಕಲನ(ದೃಢೀಕರಣ ಪತ್ರದೊಂದಿಗೆ), ಕಾವ್ಯ ಹಸ್ತಪ್ರತಿ-30 ವರ್ಷ ಒಳಗಿರುವ ಯುವ ಕವಿಗಳು ತಮ್ಮ ಅಪ್ರಕಟಿತ ಪ್ರಥಮ ಕವನ ಸಂಕಲನದ ಹಸ್ತಪ್ರತಿಯನ್ನು ಕಳಿಸಿಕೊಡಬೇಕು. ಕಾದಂಬರಿ, ಸಣ್ಣಕತೆ, ನಾಟಕ, ಲಲಿತ ಪ್ರಬಂಧ (ಹರಟೆ ಮತ್ತು ವಿನೋದ ಸಾಹಿತ್ಯ ಸೇರಿ), ಪ್ರವಾಸ ಸಾಹಿತ್ಯ, ಜೀವನ ಚರಿತ್ರೆ, ಆತ್ಮಕಥೆ, ಸಾಹಿತ್ಯ ವಿಮರ್ಶೆ (ಸಾಹಿತ್ಯ ಚರಿತ್ರೆ, ಸಾಹಿತ್ಯತತ್ವ ಮತ್ತು ಸೌಂದರ್ಯ ಮೀಮಾಂಸೆ ಸೇರಿ), ಗ್ರಂಥ ಸಂಪಾದನೆ (ಪ್ರಾಚೀನ ಕೃತಿಗಳ ಸಂಪಾದನೆ), ಮಕ್ಕಳ ಸಾಹಿತ್ಯ, ವಿಜ್ಞಾನ ಸಾಹಿತ್ಯ (ಭೌತ, ರಸಾಯನ, ಗಣಿತ, ಪ್ರಾಣಿ,

## ಲಂಚದ ಬೇಡಿಕೆಯಿಟ್ಟರೆ ನಿರ್ದಾಕ್ಷಿಣ್ಯ ಕ್ರಮ: ಡಿಸಿಎಂ

**ತುಮಕೂರು:** ರೈತರು ಹಾಗೂ ಸಾರ್ವಜನಿಕರ ಸಮಸ್ಯೆಗಳಿಗೆ ಅಧಿಕಾರಿಗಳು ಉತ್ತಮ ರೀತಿಯಲ್ಲಿ ಸ್ಪಂದಿಸಬೇಕು. ಸಾರ್ವಜನಿಕರ ಕೆಲಸ ಮಾಡಿಕೊಡಲು ಲಂಚದ ಬೇಡಿಕೆಯಿಟ್ಟು ವಿಳಂಬ ಮಾಡುವುದು ಕಂಡುಬಂದರೆ ಅಂತಹ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದೆಂದು ಉಪ ಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಜಿ.ಪರಮೇಶ್ವರ ಸೂಚಿಸಿದರು.

ಕೊರಟಗೆರೆ ತಾಲೂಕು ಕೋಳಾಲ ಹೋಬಳಿ ಚಿನ್ನಹಳ್ಳಿ ಗ್ರಾಮ ಪಂಚಾಯಿತಿ ಬಳಿ ಜರುಗಿದ ಜನಸಂಪರ್ಕ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ಲಂಚದ ಹಣ ಕೇಳುವ ಅಧಿಕಾರಿಗಳ ವಿರುದ್ಧ ಸಾರ್ವಜನಿಕರು ಹೆದರದೇ ತಮಗೆ ದೂರು ನೀಡಿ. ದೂರು ಸಾಬೀತಾದಲ್ಲಿ ತಪ್ಪದೇ ಅವರ ಮೇಲೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.



ಜಿಲ್ಲೆಗಳಿಗೆ ಕೊಂಡೊಯ್ಯಲಾಗುವುದು. ಈ ಯೋಜನೆಯನ್ನು ಕಾರ್ಯಗತಗೊಳಿಸಲು ದೊಡ್ಡಬಳ್ಳಾಪುರ ಹಾಗೂ ಕೊರಟಗೆರೆ ತಾಲೂಕುಗಳ ಸುಮಾರು 5000 ಎಕರೆ ಭೂಮಿ ಅಗತ್ಯವಿದ್ದು, ಭೂಸ್ವಾಧೀನಪಡಿಸಿಕೊಳ್ಳಲು 9 ಹಳ್ಳಿಗಳನ್ನು ಸ್ಥಳಾಂತರಿಸಬೇಕಾಗುತ್ತದೆ. ಭೂಸ್ವಾಧೀನದಿಂದ ಬಾಧಿತರಾಗುವ ರೈತರಿಗೆ ಸೂಕ್ತ

ಮುಖ್ಯವಾಗಿ ಅರ್ಹರಿಗೆ ಬಗರ್ ಹುಕುಂ ಸಾಗುವಳಿ ಚೀಟಿ ತಲುಪದೇ ಇರುವುದು, ಕುಡಿಯುವ ನೀರಿನ ಸಮಸ್ಯೆ, ಎತ್ತಿನ ಹೊಳೆ ಯೋಜನೆಯಿಂದ ಬಾಧಿತವಾಗುವ ಸುಮಾರು 12 ಹಳ್ಳಿಗಳ ಗ್ರಾಮಸ್ಥರಿಗೆ ನ್ಯಾಯ ಸಮ್ಮತ ಪರಿಹಾರಕ್ಕೆ ಸಂಬಂಧಿಸಿದಂತಹ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸತತವಾಗಿ 4 ವರ್ಷಗಳಿಂದ ಬರಗಾಲಕ್ಕೆ ತುತ್ತಾಗಿರುವ ಈ ಕ್ಷೇತ್ರದ ರೈತರು ಎಷ್ಟೇ ಕಷ್ಟ ಬಂದರೂ ಆತ್ಮಹತ್ಯೆಗೆ ಶರಣಾಗದೆ ಸ್ವಾಭಿಮಾನಿಗಳಾಗಿ, ಧೈರ್ಯವಾಗಿ ಬದುಕುತ್ತಿದ್ದಾರೆ. ಈ ನಿಟ್ಟಿನಲ್ಲಿ ಕೊರಟಗೆರೆ ತಾಲೂಕನ್ನು ಪೋಡಿಮುಕ್ತ ಗ್ರಾಮವನ್ನಾಗಿ ಘೋಷಿಸಬೇಕು ಎಂದು ಅವರು ಮನವಿ ಮಾಡಿದರು.

ಜನಸಂಪರ್ಕ ಸಭೆಯಲ್ಲಿ ಕಂದಾಯ, ಬೆಸ್ಕಾಂ, ರೇಷ್ಮೆ, ಸರ್ವೆ, ಪಶು ಸಂಗೋಪನಾ, ಆರೋಗ್ಯ, ಲೋಕೋಪಯೋಗಿ, ಕೃಷಿ, ಸಮಾಜ ಕಲ್ಯಾಣ, ತೋಟಗಾರಿಕೆ, ಆರಣ್ಯ ಇಲಾಖೆ ಹಾಗೂ

Jun 26, 2019

Download the app

Share on

paperboy

Search Newspaper, Magazine

NEWSPAPERS MY SUBSCRIPTIONS VARAPRASADARAO VENKAT

MAGAZINES LOG OUT

HOME > NEWSPAPER > KANNADA > TUMKUR VARTHE > TUMKUR VARTHE TUMKUR EPAPER

# TUMKUR VARTHE TUMKUR EDITION

Jun 26, 2019

Download the app

Share on

Search Newspaper, Magazine

NEWSPAPERS

MY SUBSCRIPTIONS


VARAPRASADARAO VENKAT

MAGAZINES

LOG OUT

HOME > NEWSPAPER > KANNADA > TUMKUR VARTHE > TUMKUR VARTHE TUMKUR EPAPER

# TUMKUR VARTHE TUMKUR EDITION



Jun 26, 2019

Download the app

Share on

paperboy

Search Newspaper, Magazine

NEWSPAPERS MY SUBSCRIPTIONS VARAPRASADARAO VENKAT

MAGAZINES LOG OUT

HOME > NEWSPAPER > KANNADA > TUMKUR VARTHE > TUMKUR VARTHE TUMKUR EPAPER

# TUMKUR VARTHE TUMKUR EDITION

Jun 26, 2019

Download the app

Share on

Search Newspaper, Magazine

NEWSPAPERS MY SUBSCRIPTIONS VARAPRASADARAO VENKAT

MAGAZINES LOG OUT

HOME > NEWSPAPER > KANNADA > TUMKUR VARTHE > TUMKUR VARTHE TUMKUR EPAPER

# TUMKUR VARTHE TUMKUR EDITION



Jun 26, 2019

Download the app

Share on

paperboy

Search Newspaper, Magazine

NEWSPAPERS

MY SUBSCRIPTIONS

VARAPRASADARAO VENKAT

MAGAZINES

LOG OUT

HOME > NEWSPAPER > KANNADA > TUMKUR VARTHE > TUMKUR VARTHE TUMKUR EPAPER

# TUMKUR VARTHE TUMKUR EDITION

+

−